# ಕ್ಲಬ್‌ಹೌಸ್ ಎಂಬ ಕಾಫಿಹೌಸ್

ಸಮಾನಮನಸ್ಕರು ಹರಟೆ ಹೊಡೆಯಲಿಕ್ಕೆ ಕಾಫಿಹೌಸ್ ಪ್ರಸಿದ್ಧ. ಇದೇ ಮಾದರಿಯಲ್ಲಿ ರೂಪುಗೊಂಡಿರುವ 'ಕ್ಲಬ್‌ಹೌಸ್' ಕೂಡ ಮಾತಿನಮಲ್ಲರ ಕಟ್ಟೆಯೇ. ಆದರೆ, ಇಲ್ಲಿ ಮಾತನಾಡಬಹುದಷ್ಟೇ, ನೋಟ ಸಾಧ್ಯವಿಲ್ಲ.

■ **ಶಶಿಕುಮಾರ್ ಸಿ.**




ಸಾಮಾಜಿಕ ಜಾಲತಾಣ ಕ್ಷೇತ್ರಕ್ಕೆ ಹೊಸದಾಗಿ ಎಂಟ್ರಿಕೊಟ್ಟಿರುವ 'ಕ್ಲಬ್‌ಹೌಸ್' (Clubhouse) ಆ್ಯಪ್ ಈಗ ಭಾರತಕ್ಕೂ ಕಾಲಿಟ್ಟಿದ್ದು, ಟ್ರೆಂಡ್ ಸೃಷ್ಟಿಸುತ್ತಿದೆ. ಸಿನಿಮಾರಂಗದಲ್ಲೂ ಹೊಸ ಚರ್ಚೆಯನ್ನು ಇದು ಹುಟ್ಟುಹಾಕಿದೆ. ಫೇಸ್‌ಬುಕ್, ವಾಟ್ಸ್‌ಆ್ಯಪ್, ಟ್ವೀಟರ್‌ನಂತಹ ಸಾಮಾಜಿಕ ಜಾಲತಾಣಗಳು ಗಟ್ಟಿಯಾಗಿ ನೆಲೆಯೂರಿರುವ ಸಮಯದಲ್ಲೂ 'ಕ್ಲಬ್‌ಹೌಸ್' ತನ್ನ ಅಸ್ತಿತ್ವವನ್ನು ಬಹುಕಾಲದವರೆಗೂ ಉಳಿಸಿಕೊಳ್ಳುವ ಭರವಸೆ ಮೂಡಿಸಿದೆ.

ಆಡಿಯೊ ಸಂದೇಶ ರವಾನೆ ಸೇವೆಯನ್ನು ಮಾತ್ರ ಹೊಂದಿರುವ ಈ ಆ್ಯಪ್ ಸೋಷಿಯಲ್ ಮೀಡಿಯಾ ಚಾಟಿಂಗ್‌ಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ವಾಟ್ಸ್‌ಆ್ಯಪ್, ಟೆಲಿಗ್ರಾಮ್‌ನಂತೆ ಇದರಲ್ಲೂ ಗ್ರೂಪ್‌ಗಳನ್ನು ರಚಿಸಿಕೊಳ್ಳಬಹುದಾಗಿದ್ದು, ಸುಮಾರು 5000 ಮಂದಿಯವರೆಗೆ ಇದರಲ್ಲಿ ಭಾಗಿ ಆಗಬಹುದು. ಈ ಆ್ಯಪ್‌ನಲ್ಲಿ ಬಳಕೆದಾರರು ಬರೀ ಮಾತು ಆಡಬಹುದು ಹಾಗೂ ಇನ್ನೊಬ್ಬರ ಮಾತನ್ನು ಕೇಳಿಸಿಕೊಳ್ಳಬಹುದು. ಆ ಕಾರಣದಿಂದಾಗಿ ಇದನ್ನು 'ಸೋಷಿಯಲ್ ಆಡಿಯೊ ಆ್ಯಪ್' ಎಂತಲೂ ಕರೆಯುತ್ತಾರೆ. ಇತರ ಜಾಲತಾಣಗಳಂತೆ ಇದರಲ್ಲಿ ಪೋಸ್ಟ್ ಹಾಕಲು ಸಾಧ್ಯವಿಲ್ಲ ಮತ್ತು ಸಂದೇಶವನ್ನು ಟೈಪ್ ಮಾಡಲಾಗುವುದಿಲ್ಲ. ಅದರ ಬದಲು ಇಲ್ಲಿ ವಾಯ್ಸ್ ಚಾಟ್ ಮೂಲಕವೇ ಸಂವಹನ ನಡೆಯುತ್ತದೆ.

ಕ್ಲಬ್‌ಹೌಸ್ ಆ್ಯಪ್ ಬಳಕೆದಾರರು ಚಾಟ್ ರೂಮ್‌ಗಳಲ್ಲಿ ಧ್ವನಿಯ ಮೂಲಕ ಸಂವಹನ ನಡೆಸಬಹುದು. ಇದು 'ಆಡಿಯೊ ಓನ್ಲಿ ಆ್ಯಪ್'. ನೇರ ಮಾತುಕತೆಗಳನ್ನು ಆಯೋಜಿಸುವುದಕ್ಕೆ ಈ ಪ್ಲಾಟ್‌ಫಾರ್ಮ್ ಬಳಸಬಹುದು.

ಗೂಗಲ್ ಪ್ಲೇಸ್ಟೋರ್‌ನಲ್ಲಿ ಕ್ಲಬ್‌ಹೌಸ್ ಬಳಕೆದಾರರಿಗೆ ಲಭ್ಯವಿದೆ. ಡೌನ್‌ಲೋಡ್ ಮಾಡಿ, ಮೊಬೈಲ್ ಸಂಖ್ಯೆಯ ಮೂಲಕ ವೆರಿಫಿಕೇಷನ್ ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಇದು ಬಳಕೆಗೆ ಲಭ್ಯವಾಗುತ್ತದೆ. ಆದರೆ, ವೆರಿಫಿಕೇಷನ್ ವೇಳೆ ಸಾಕಷ್ಟು ಬಳಕೆದಾರರಿಗೆ ತಾಂತ್ರಿಕ ತೊಡಕು ಎದುರಾದ ಬಗ್ಗೆ ಆಕ್ಷೇಪ ವ್ಯಕ್ತವಾಗಿದೆ.

ಪ್ಲೇ ಸ್ಟೋರ್ ರಿವ್ಯೂಸ್ ಪ್ರಕಾರ, ಸೈನ್ ಅಪ್ ಮಾಡುವುದಕ್ಕೂ ಸಮಸ್ಯೆ ಆಗುತ್ತಿದೆ. ತ್ವರಿತವಾಗಿ ವೆರಿಫಿಕೇಷನ್ ಕೋಡ್ ದೊರೆಯುತ್ತಿಲ್ಲ ಮತ್ತು ಸಂಖ್ಯೆಯನ್ನು ಮರು ನಮೂದಿಸಲು ಮೊಬೈಲ್‌ನಲ್ಲಿ ಯತ್ನಿಸಿದಾಗ ಅಂಕಿಗಳು ತಪ್ಪಾಗಿವೆ ಅಥವಾ ಇದನ್ನು ಬೆಂಬಲಿಸುವುದಿಲ್ಲ ಎಂಬ ಸಂದೇಶ ಕಾಣಿಸಿಕೊಳ್ಳುತ್ತಿದೆ. ಇಷ್ಟೆಲ್ಲ ತೊಡಕಿದ್ದರೂ ಈ ಆ್ಯಪ್‌ನತ್ತ ಮುಖ ಮಾಡುತ್ತಿರುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದು ಗಮನಾರ್ಹ.

ಐಫೋನ್ ಆಪರೇಟಿಂಗ್ ಸಿಸ್ಟಂ (ಐಒಎಸ್)ನಲ್ಲಿ ಕ್ಲಬ್‌ಹೌಸ್ ಇನ್ವೈಟ್ ಆಯ್ಕೆಯ ಮೂಲಕವೂ ಡೌನ್‌ಲೋಡ್ ಮಾಡಬಹುದು. ಐಒಎಸ್ ಆಧಾರಿತ ಫೋನ್‌ನ ಮೂಲಕ ಬಳಕೆದಾರರು ಆಹ್ವಾನ ನೀಡಿದ ಬಳಿಕ ಮತ್ತೊಬ್ಬರು ಈ ಆ್ಯಪ್ ಅನ್ನು ಡೌನ್‌ಲೋಡ್ ಮಾಡಬಹುದು. ಅಲ್ಲದೇ ಆ್ಯಪಲ್ ಸ್ಟೋರ್‌ನ ಮೂಲಕವೂ ಇದು ಲಭ್ಯ.

ಸೈನ್ ಅಪ್ ವೇಳೆಯಲ್ಲಿನ ತಾಂತ್ರಿಕ ತೊಡಕಿನಿಂದಾಗಿ ಪ್ಲೇ ಸ್ಟೋರ್‌ನಲ್ಲಿ ಕ್ಲಬ್‌ಹೌಸ್ ಆ್ಯಪ್‌ಗೆ 1 ಸ್ಟಾರ್ ರೇಟಿಂಗ್ ಮಾತ್ರ ಸಿಕ್ಕಿದೆ. ಈ ಆ್ಯಪ್ ಅನ್ನು ದೇಶದಲ್ಲಿ ಈಗಾಗಲೇ 10 ಲಕ್ಷಕ್ಕೂ ಹೆಚ್ಚು ಆ್ಯಂಡ್ರಾಯ್ಡ್ ಬಳಕೆದಾರರು ಡೌನ್‌ಲೋಡ್ ಮಾಡಿಕೊಂಡು ಬಳಸುತ್ತಿದ್ದಾರೆ.

ಸ್ಪೇಸ್ ಎಕ್ಸ್ ಸಂಸ್ಥೆಯ ಎಲಾನ್ ಮಸ್ಕ್, ಫೇಸ್‌ಬುಕ್‌ನ ಮಾರ್ಕ್ ಝುಕರ್‌ಬರ್ಗ್ ಸೇರಿದಂತೆ ಇನ್ನೂ ಹಲವು ಗಣ್ಯರು ಈ ಆ್ಯಪ್ ಅನ್ನು ಬಳಸುತ್ತಿರುವುದರಿಂದ ಇದರ ಜನಪ್ರಿಯತೆ ಹೆಚ್ಚಾಗಿದೆ. ಕ್ಲಬ್ ಹೌಸ್‌ಗೆ ಮೊದಲ ಹೆಜ್ಜೆಯಲ್ಲೇ ಹತ್ತಾರು ಲಕ್ಷ ಬಳಕೆದಾರರು ಸಿಕ್ಕಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಆಡಿಯೊ ಆಧಾರಿತ ಸೋಷಿಯಲ್ ಆ್ಯಪ್‌ಗಳ ಬಗ್ಗೆ ಜನರು ಹೆಚ್ಚು ಆಸಕ್ತರಾಗಿದ್ದಾರೆ. ಹೀಗಾಗಿಯೇ ಆಡಿಯೊ ಆಧಾರಿತ ಸೋಷಿಯಲ್ ಆ್ಯಪ್‌ಗಳ ಅಭಿವೃದ್ಧಿ ಕಾರ್ಯಗಳೂ ನಡೆಯುತ್ತಲೇ ಇವೆ.

ಫೇಸ್‌ಬುಕ್‌ನಿಂದ ಆಡಿಯೊ ಚಾಟ್ ಆಧಾರಿತ ಫೀಚರ್ ಅಭಿವೃದ್ಧಿಗೆ ತಯಾರಿ ನಡೆದರೆ, ಇದೇ ಹಾದಿಯನ್ನು ಲಿಂಕ್ಡ್‌ಇನ್ ಸಹ ತುಳಿದಿದೆ. ಫೇಸ್‌ಬುಕ್‌ನ ಈ ಹೊಸ ಫೀಚರ್, ಮೆಸೆಂಜರ್ ಆ್ಯಪ್‌ಗೆ ಸೇರ್ಪಡೆಯಾಗಬಹುದು. ಕೆಲವು ಹೆಸರಾಂತ ಸೋಷಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ಗಳು ಈಗಾಗಲೇ ಕ್ಲಬ್‌ಹೌಸ್‌ಗೆ ಪರ್ಯಾಯ ಆ್ಯಪ್‌ಗೆ ತಂದಿವೆ. ಟ್ವಿಟ್ಟರ್ ಸ್ಪೇಸಸ್, ಡಿಸ್ಕಾರ್ಡ್ ಸ್ಟೇಜ್ ಚಾನೆಲ್, ಇನ್‌ಸ್ಟಾಗ್ರಾಮ್ ಲೈವ್ ರೂಮ್ಸ್, ಟೆಲಿಗ್ರಾಮ್ ಕೂಡ ವಾಯ್ಸ್ ಚಾಟ್ಸ್ 2.0 ತಂದಿದೆ.

ಈ ಆ್ಯಪ್‌ನಲ್ಲಿ ನಡೆಯುವ ಸಂಭಾಷಣೆಗಳ ರೆಕಾರ್ಡ್ ಮಾಡುವುದಕ್ಕೆ, ದಾಖಲಿಸುವುದಕ್ಕೆ, ಮತ್ತೊಮ್ಮೆ ಪ್ರಸಾರ ಮಾಡುವುದಕ್ಕೆ ಅವಕಾಶ ಇಲ್ಲ. ಆದ್ದರಿಂದ ಬೆದರಿಕೆ, ಜನಾಂಗೀಯ ನಿಂದನೆ ಇಂಥದ್ದು ಆಗಬಹುದು. ಆಗ ದೂರು ನೀಡಲು ಸಾಧ್ಯವಿಲ್ಲ ಎಂಬ ಆರೋಪವೂ ಇದರ ಮೇಲಿದೆ. ಇನ್ನು ಈ ಆ್ಯಪ್‌ನ ಮೂಲದಲ್ಲೇ ಖಾಸಗಿತನ ಕಾಯ್ದುಕೊಳ್ಳುವುದಕ್ಕೂ ಸಮಸ್ಯೆ ಇದ್ದು, ಒಮನ್, ಜೋರ್ಡಾನ್, ಚೀನಾ ಸೇರಿದಂತೆ ಕೆಲವು ದೇಶಗಳು ಈ ಆ್ಯಪ್‌ನ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿವೆ. ■